# ಆನಂದಮಠ
# ಬಂಕಿಮ್‌ಚಂದ್ರ ಚಟರ್ಜಿ

ಅನುವಾದ: ಜೂಲಿಯಸ್ ಜೆ. ಲಿಪ್ನರ್

ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್
೨೦೦೫

## ಅಧ್ಯಾಯ -೧೦

ಅವರಿಬ್ಬರೂ ಆ ಬೆಳದಿಂಗಳ ಇರುಳಿನಲ್ಲಿ ಒಂದು ಮೈದಾನದುದ್ದಕ್ಕೂ ಮೌನವಾಗಿ ನಡೆಯುತ್ತಿದ್ದರು. ಮೌನದಿಂದಿದ್ದ ಮಹೇಂದ್ರ ದೃಡವಾಗಿದ್ದರೂ, ಗೊಂದಲದಿಂದ ಬೇಗುದಿಗೊಂಡಿದ್ದನು. ಆದರೆ ತಕ್ಷಣವೇ ಭಾಬಾನಂದ ಬೇರೊಬ್ಬನಾದಂತೆ ಅನ್ನಿಸಿತು. ಅವನು ಈಗ ರಣಭೂಮಿಯ ನಿಶ್ಚಲ, ಗಂಭೀರ, ತ್ಯಾಗಮಯಿ, ಸಮರಕುಶಲ, ಶೂರನಂತೆ ಕಾಣಲಿಲ್ಲ, ಕಮಾಂಡಿಗ್ ಆಫೀಸರ್‌ನ ತಲೆಯನ್ನು ಕಡಿದುರುಳಿಸಿದ ಹಾಗೂ ಇದೀಗ ತಾನೇ ಮಹೇಂದ್ರನನ್ನು ದರ್ಪದಿಂದ ನಿಂದಿಸಿದ್ದ ವ್ಯಕ್ತಿಯಾಗಿರಲಿಲ್ಲ ಚಂದ್ರೋದಯದ ಆನಂದದಲ್ಲಿ ಮೆರೆಯುವ ಸಮುದ್ರದಂತೆ, ಬೆಳದಿಂಗಳಿನ ಪ್ರಶಾಂತ ಜಗತ್ತಿನ, ಕಾಡು, ಮೈದಾನ, ನದಿ, ಪರ್ವತಗಳ ನೋಟವು ಅವನ ಮನಸ್ಸಿಗೆ ವಿಶೇಷ ಚೈತನ್ಯವನ್ನು ನೀಡಿದಂತಿತ್ತು. ಆತನ ಹೃದಯವೀಗ ಸ್ನೇಹಮಯವಾಗಿ ಹಗುರಾಗಿತ್ತು. ಈಗ ಅವನಿಗೆ ಮಾತಾಡುವ ಉತ್ಸುಕತೆ. ಆತನು ಆಗಾಗ್ಗೆ ಮಹೇಂದ್ರನ ಮೌನವನ್ನು ಮುರಿಯಲು ಪ್ರಯತ್ನಿಸಿದನಾದರೂ ಅದು ಸಾಧ್ಯವಾಗಲಿಲ್ಲ. ಬೇರೆ ದಾರಿ ಕಾಣದೆ ಭಾಬಾನಂದ, ಮೆಲ್ಲನೆ ಹಾಡತೊಡಗಿದ.

ವಂದೇ ಮಾತರಂ[1]
ಜಲ, ಫಲ ಸಂಪತ್ತಿನಲಿ
ತಂಪಾಗಿ ಸುಳಿವ ತೆಂಕಣದ ಗಾಳಿಯಲಿ
ಹಚ್ಚ ಹಸಿರಿನ ಬಲುಸುಂದರ ಸುಗ್ಗಿಯಲಿ
ಮೆರೆವ ಮಹಾತಾಯೆ ವಂದಿಸುವೆ ನಿನಗೆ.

ಮಹೇಂದ್ರನು ಈ ಹಾಡನ್ನು ಆಲಿಸಿದಾಗ, ಅವನಿಗೆ ಸ್ವಲ್ಪ ಆಶ್ಚರ್ಯವೆನಿಸಿತು. ಯಾರು ಈ “ಜಲ, ಫಲ ಸಂಪತ್ತಿನಲ್ಲಿ, ತಂಪಾಗಿ ಸುಳಿವ ತೆಂಕಣದ ಗಾಳಿಯಲ್ಲಿ, ಹಚ್ಚ ಹಸಿರಿನ ಬಲುಸುಂದರ ಸುಗ್ಗಿಯಲ್ಲಿ ಮೆರೆವ ಮಹಾತಾಯಿ”?
“ಯಾರು ಈ ಮಹಾತಾಯಿ?” ಅವನು ಕೇಳಿದ.
ಅವನಿಗೆ ಉತ್ತರಿಸದೆ ಭಾಬಾನಂದ ಹಾಡನ್ನು ಮುಂದುವರಿಸಿದ.

ಚಂದಿರನ ಬೆಳಕಿನಲಿ ರೋಮಾಂಚನ ರಾತ್ರಿ
ಪ್ರಭೆಯಿಂದ ಕಂಗೊಳಿಪ ಪರ್ಣರಾಶಿ
ಪುಲಕಗೊಳಿಸುವ ಪುಷ್ಪರಾಶಿ
ಮಧುರ ಹಾಸದಲಿ, ಮೃದುಮಧುರದನಿ ನೀನು
ಅಪರಿಮಿತ ಕೊಡುಗೆಗಳ ಆನಂದದಾತೆ
ನೀ ಮಹಾಮಾತೆ.

---

[1] ಇದು, ಕಾದಂಬರಿಯಲ್ಲಿ ಮುಂದೆ ಹಲವು ಬಾರಿ ಬರುವ ಸಂಸ್ಕೃತ ಘೋಷ, ವಂದೇ ಮಾತರಂನ ಮೊದಲ ಪ್ರಸ್ತುತಿ.

ಮಹೇಂದ್ರ ಗಟ್ಟಿಯಾಗಿ ಹೇಳಿದ, ಅದು ತಾಯಿಯಲ್ಲ, ನಮ್ಮ ಭೂಮಿ![2]".
ಭಾಬಾನಂದ ಉತ್ತರಿಸಿದ, ನಾವು ಬೇರಾವ ತಾಯಿಯನ್ನೂ ಗುರುತಿಸೆವು. ತಾಯಿ ಹಾಗೂ ಜನ್ಮಭೂಮಿಯು ಸ್ವರ್ಗಕ್ಕಿಂತಲೂ ಹೆಚ್ಚಿನದು. ಆದರೆ ನಾವು ನಮ್ಮ ಜನ್ಮಭೂಮಿಯನ್ನೇ ತಾಯಿಯೆನ್ನುತ್ತೇವೆ. ನಮಗೆ ತಾಯಿ, ತಂದೆ, ಸೋದರರು, ಗೆಳೆಯರು, ಮಡದಿ, ಮಕ್ಕಳು, ಮನೆ ಮಠ ಯಾರೂ, ಯಾವುದೂ ಇಲ್ಲ. ನಮಗಿರುವುದು ಅವಳೋರ್ವಳೆ. ಜಲ, ಫಲ ಸಂಪತ್ತಿನಲ್ಲಿ, ತಂಪಾಗಿ ಸುಳಿವ ತೆಂಕಣದ ಗಾಳಿಯಲ್ಲಿ, ಹಚ್ಚ ಹಸಿರಿನ ಬಲುಸುಂದರ ಸುಗ್ಗಿಯಲ್ಲಿ ಮೆರೆವ ಮಹಾತಾಯಿ.

"ಹಾಗಿದ್ದರೆ ಹಾಡು", ಕೊನೆಗೂ ಮಹೇಂದ್ರ ಅರಿತು ನುಡಿದ.
ಭಾಬಾನಂದ ಮತ್ತೊಮ್ಮೆ ಹಾಡಿದ:

ವಂದೇ ಮಾತರಂ
ಜಲ, ಫಲ ಸಂಪತ್ತಿನಲಿ
ತಂಪಾಗಿ ಸುಳಿವ ತೆಂಕಣದ ಗಾಳಿಯಲಿ
ಹಚ್ಚ ಹಸಿರಿನ ಬಲು ಸುಂದರ ಸುಗ್ಗಿಯಲಿ
ಮೆರೆವ ಮಹಾತಾಯೆ ವಂದಿಸುವೆ ನಿನಗೆ.

ಚಂದಿರನ ಬೆಳಕಿನಲಿ ರೋಮಾಂಚನ ರಾತ್ರಿ
ಪ್ರಭೆಯಿಂದ ಕಂಗೊಳಿಪ ಪರ್ಣರಾಶಿ
ಪುಲಕಗೊಳಿಸುವ ಪುಷ್ಪರಾಶಿ
ಮಧುರ ಹಾಸದಲಿ, ಮೃದುಮಧುರದನಿ ನೀನು
ಅಪರಿಮಿತ ಕೊಡುಗೆಗಳ ಆನಂದದಾತೆ
ನೀ ಮಹಾಮಾತೆ.

ದುರ್ಬಲಳು ಹೌದೆ? ಅದು ಹೇಗೆ ತಾಯೆ
ಏಳುಕೋಟಿ ಶೂರ ದನಿಗಳ ಶಕ್ತಿ
ಎದೆ ಉಬ್ಬಿ ಒಂದಾಗಿ ಎರಗುವುದು ಸಿಡಿಲಾಗಿ!
ಇಮ್ಮಡಿ ಕೈಗಳಲಿ ಹರಿತಗೊಳಿಸಿದ ಖಡ್ಗ!

ತಲೆಬಾಗಿ ನಮಿಸುವೆನು ಮಹಾತಾಯೆ ನಿನಗೆ
ಅಪರಿಮಿತ ಶಕ್ತಿಯ ಉಜ್ವಲ ಪ್ರಭೆ ನೀನು
ಉಳಿಸುವೆ ನೀ ನಮ್ಮ ಶತ್ರುಗಳ ದಂಡಟ್ಟಿ!

ನೀ ನಮ್ಮ ಬುದ್ಧಿ, ನಮ್ಮೆಲ್ಲ ನಿಯಮ
ನಮ್ಮೆಲ್ಲ ಹೃದಯ, ನಮ್ಮೆಲ್ಲ ತಿರುಳು
ನಮ್ಮ ಕಾಯದ ಜೀವಂತ ಶಕ್ತಿ!

ನಮ್ಮ ತೋಳ್ಬಲವೆಂದೂ ಮಾತಾಯೆ ನೀನು,
ನಮ್ಮ ಹೃದಯದ ಸಾಂತ್ವನದ ಚಿಲುಮೆ

---

[2] ಈ ಕೃತಿಯು ವೃದ್ಧಿಸುತ್ತಿದ್ದ ರಾಷ್ಟ್ರೀಯತಾ ಚಳುವಳಿಗೆ ತಾಯ್ನಾಡಿನ ಮತ್ತು ನಂತರದಲ್ಲಿ ಭಾರತ ಮಾತೆ(Mother India)ಯ ಪ್ರತಿಮೆ(images)ಗಳನ್ನು ನೀಡಿತು.

ನಿನ್ನ ರೂಪವೆ ಒಂದೊಂದು ಗುಡಿಯ ಪ್ರತಿಮೆ

ತಾಯಿ ದುರುಗೆಯು ನೀನು ಮಾತೆ
ಧರಿಪೆ ನೀ ನೂರ್ಮಡಿಯ ಶಕ್ತಿ ಮಾತೆ
ಪದ್ಮಪುಷ್ಪದ ಮೇಲೇರಿ ಮೆರೆವ
ಐಸಿರಿಯು ನೀನು, ವಾಗ್ದೇವಿ ನೀನು
ದಯಪಾಲಿಸೆಮಗೆ ನೀ ವಿದ್ಯೆ ಬುದ್ಧಿ

ಸೌಂದರ್ಯ ದೇವತೆಯೆ ನಿನಗೆ ನಮನ
ಜಲ, ಫಲ ಸಂಪತ್ತಿನಲಿ ಅಪ್ರತಿಮ ಶುದ್ಧೆ
ವಂದೇ ಮಾತರಂ
ಹಚ್ಚ ಹಸಿರಿನ ನೀನು ಸತ್ಯ ತಾಯೆ
ವೈಭವದ ಉಡುಗೆಯ ಹರ್ಷವದನೆ
ಅನಂತ ಐಸಿರಿಯ ಸೊಬಗಿನ ಭೂತಾಯೆ.

ಈ ಡಾಕು(bandit) ಹಾಡುತ್ತಾ, ಹಾಡುತ್ತಾ ಕಣ್ಣೀರುಗರೆಯುತ್ತಿದ್ದುದನ್ನು ನೋಡಿದ ಮಹೇಂದ್ರ, ಗಲಿಬಿಲಿಗೊಂಡು ಕೇಳಿದ, ಯಾರು ನೀವು?”
ಭಾಬಾನಂದ ಉತ್ತರಿಸಿದ, ನಾವು ಮಕ್ಕಳು”.
“ಹಾಗಂದರೇನು? ಯಾರ ಮಕ್ಕಳು?” “ಮಾತೆಯ ಮಕ್ಕಳು”.
ಮಹೇಂದ್ರ ಕೇಳಿದ, ಸರಿ, ಮಕ್ಕಳು ಯಾರಾದರೂ ದರೋಡೆ, ಲೂಟಿ ಮಾಡಿ ಅವರ ತಾಯಿಗೆ ಗೌರವ ತರುತ್ತಾರೆಯೇ? ಇದಾವ ಸೀಮೆಯ ಪ್ರೀತಿ?”
ಭಾಬಾನಂದ ಉತ್ತರಿಸಿದ, ನಾವು ದರೋಡೆ, ಲೂಟಿ ಮಾಡುವುದಿಲ್ಲ”.
“ಆದರೆ ನೀನು ಈಗ ತಾನೇ ಆ ಗಾಡಿಗಳನ್ನು ಲೂಟಿ ಮಾಡಿದೆ!”
“ಅದು ದರೋಡೆ ಮತ್ತು ಲೂಟಿಯೇ? ಯಾರ ಹಣವನ್ನು ತಾನೇ ನಾವು ಲೂಟಿ ಮಾಡಿದಿವಿ?”
“ಇನ್ನು ಯಾರದ್ದು? ರಾಜನದ್ದು!”
“ರಾಜನದ್ದಾ!” ಭಾಬಾನಂದ ಹೇಳಿದ, ರಾಜನಿಗೆ ಆ ಹಣ ತೆಗೆದುಕೊಳ್ಳುವ ಹಕ್ಕು ಇದೆಯಾ?”
“ಅದು ರಾಜನ ಪಾಲು”.
ಭಾಬಾನಂದ ಹೇಳಿದ, ತನ್ನ ರಾಜ್ಯವನ್ನು ನೋಡಿಕೊಳ್ಳದೇ ಇರುವ ರಾಜ ರಾಜನೇ ಅಲ್ಲ”.
“ಒಂದು ದಿವಸ ಆ ಸಿಪಾಯಿಗಳು ನಿಮ್ಮನ್ನೆಲ್ಲಾ ಫಿರಂಗಿ ಬಾಯಿಗೆ ಕಟ್ಟಿ ಉಡಾಯಿಸ್ತಾರೆ!”
“ಚಿಂತಿಸಬೇಡಿ. ನಾನು ಆ ನೀಚ ಸಿಪಾಯಿಗಳನ್ನು ತುಂಬಾ ನೋಡಿದೀನಿ. ಇವತ್ತೂ ಒಂದಿಷ್ಟು ಜನಾನ ನೋಡಿದೆ!”
“ನೀನು ಸರಿಯಾಗಿ ನೋಡ್ಲಿಲ್ಲ. ಒಂದು ದಿವಸ ನೀನು ನಿಜವಾಗ್ಲೂ ನೋಡ್ತೀಯ”, ಮಹೇಂದ್ರ ಹೇಳಿದ.
“ಇರಬಹುದು,” ಭಾಬಾನಂದ ಹೇಳಿದ, ಒಬ್ಬರು ಒಮ್ಮೆ ಮಾತ್ರ ಸಾಯೋದು”.
“ಹೌದು. ಆದರೆ ಯಾಕೆ ಸಾಯಬೇಕು?”
ಭಾಬಾನಂದ ಉತ್ತರಿಸಿದ, ಮಹೇಂದ್ರ ಸಿಂಹ, ನಾನು ನಿನ್ನನ್ನು ಒಬ್ಬ ಯೋಗ್ಯ ಮನುಷ್ಯ ಅಂದುಕೊಂಡಿದ್ದೆ. ಆದರೆ ಈಗ ನಾನು ನೋಡ್ತಾ ಇದೀನಿ. ನೀನು ಎಲ್ಲರ ತರಹವೇ. ಒಳ್ಳೇದು ಸಿಕ್ಕಿದ್ದನ್ನು ಸುಖವಾಗಿ ತಿಂದುಕೊಂಡು ಬದುಕೋನು. ನೋಡು, ಒಂದು ಹಾವು ನೆಲದ ಮೇಲೆ ತೆವಳಿಕೊಂಡು ಬದುಕೋ ಕೆಳಮಟ್ಟದ ಪ್ರಾಣಿ. ಆದ್ರೆ ಅದನ್ನು ತುಳಿದರೆ ತನ್ನ ಹೆಡೆ ಎತ್ತುತ್ತೆ! ಏನು ನಡೀತಾ ಇದೆ ಅನ್ನುವುದನ್ನು ನೋಡಿದರೆ ನಿನಗೆ ಸ್ವಲ್ಪವೂ ಬೇಸರ ಆಗುವುದಿಲ್ಲವಾ? ಬೇರೆ ಊರುಗಳನ್ನು ನೋಡು—ಮಗಧ, ಮಿಥಿಲಾ, ಕಾಶಿ, ಕಂಚಿ, ದೆಹಲಿ, ಕಾಶ್ಮೀರ—ಎಲ್ಲಿ ತಾನೆ ಇಷ್ಟು ಅವ್ಯವಸ್ಥೆಯಿದೆ? ಬೇರೆ ಎಲ್ಲಿ ತಾನೆ ಜನ ತಿನ್ನುವುದಕ್ಕೆ ಅನ್ನ ಇಲ್ಲ ಅಂತ ಹುಲ್ಲು/ಗಿಡ/ಹುತ್ತ ಅಥವಾ

ಬಳ್ಳಿಗಳನ್ನು ತಿನ್ನುವ ಪರಿಸ್ಥಿತಿ ಇದೆ? ಎಲ್ಲಿ ತಾನೆ ಜನ ನಾಯಿ, ನರಿಗಳನ್ನು ಮತ್ತು ಹೆಣಗಳನ್ನು ತಿಂದು ಬದುಕ್ತಾರೆ? ಅವರು ದುಡ್ಡನ್ನು ಮನೆಗೆ ಬೀಗ ಹಾಕಿ ಇಟ್ಟಿದ್ದರೂ, ಸಾಲಿಗ್ರಾಮವನ್ನು[3] ಪ್ರತಿಷ್ಠಾಪನೆ ಮಾಡಿದ್ದರೂ, ಹೆಂಡತಿ ಮಕ್ಕಳನ್ನು ಮನೆಯ ಒಳಗೇ ಇಟ್ಟಿದ್ದಾಗಲೂ, ಯಾರಾದರೂ ಹೆಂಗಸರು ಮಗುವಾಗೊ ನಿರೀಕ್ಷೇಲಿದ್ದಾಗಲೂ ಅವರಿಗೆ ನೆಮ್ಮದಿಯಿಲ್ಲ. ಈ ಪರಿಸ್ಥಿತಿ ಬೇರೆ ಎಲ್ಲಿ ತಾನೆ ಇದೆ? ಇಲ್ಲಿ ಹೆಣ್ಣು ಮಕ್ಕಳ ಹೊಟ್ಟೆ ಕೊಯ್ದು ಗರ್ಭದಲ್ಲಿರೊ ಮಕ್ಕಳನ್ನು ಸೀಳಿ ಹಾಕ್ತಾರೆ. ಎಲ್ಲಾ ಕಡೆ ರಾಜನಿಗೆ ಪ್ರಜೆಗಳನ್ನು ರಕ್ಷಿಸುವ ಹೊಣೆ ಇರುತ್ತೆ. ಈ ನಮ್ಮ ಮುಸ್ಲಿಮ್ ರಾಜ ನಮ್ಮನ್ನು ರಕ್ಷಿಸುತ್ತಾನಾ? ನಾವು ಧರ್ಮದ ಜೀವನ, ಜಾತಿ, ಅಂತಸ್ತು, ಸ್ವಾಭಿಮಾನ, ಕುಟುಂಬದ ಸಂಬಂಧ ಎಲ್ಲಾ ಕಳೆದುಕೊಂಡಿದೀವಿ. ಇನ್ನು ನಮ್ಮ ಜೀವ ಕಳೆದುಕೊಳ್ತೀವೆ ಅಷ್ಟೆ. ಈ ಕುಲಗೆಟ್ಟ ಗಡ್ಡದೋರಿಂದ ಪಾರಾಗದಿದ್ದರೆ ನಮ್ಮಲ್ಲಿ ನಾವು ಹಿಂದೂಗಳು ಅಂದುಕೊಳ್ಳುವುದಕ್ಕೆ ಏನೂ ಉಳಿದಿರುವುದಿಲ್ಲ".

ಮಹೇಂದ್ರ ಕೇಳಿದ,

ಅವರಿಂದ ಹೇಗೆ ಪಾರಾಗ್ತೀಯ?"

ಭಾಬಾನಂದ ಉತ್ತರಿಸಿದ," ಅವರನ್ನು ನಾಶ ಮಾಡೋದರಿಂದ".

"ಏನು, ನೀನೇ ನಾಶ ಮಾಡ್ತೀಯಾ? ಕೇವಲ ಒಂದು ಏಟಿನಿಂದ?"

ಡಾಕು ಹಾಡಿದ:

ದುರ್ಬಲಳು ಹೌದೆ? ಅದು ಹೇಗೆ ತಾಯೆ
ಶೂರ ದನಿಗಳ ಶಕ್ತಿ ಏಳುಕೋಟಿ!
ಎದೆ ಉಬ್ಬಿ ಒಂದಾಗಿ ಎರಗುವುದು ಸಿಡಿಲಾಗಿ
ಇಮ್ಮಡಿ ಕೈಗಳಲಿ ಹರಿತಗೊಳಿಸಿದ ಖಡ್ಗ!

ಮಹೇಂದ್ರ ಹೇಳಿದ, ಆದರೆ ನಾನು ನೋಡಿದ ಹಾಗೆ ನೀನು ಒಬ್ಬನೇ ಇದೀಯ!"

"ಅದು ಹೇಗೆ ನೀನು ಆ ರೀತಿ ಹೇಳ್ತೀಯ? ಈಗಿನ್ನೂ ನೀನು ಇನ್ನೂರು ಜನರನ್ನು ನೋಡಿದೆಯಲ್ಲ!"

"ಅವರೆಲ್ಲರೂ ನೀನು ಹೇಳುವ ಮಕ್ಕಳಾ?"

"ಪ್ರತಿಯೊಬ್ಬರೂ".

"ಅವರಲ್ಲದೆ ಇನ್ನೆಷ್ಟು ಜನ ಇದಾರೆ?"

"ಈಗ ಸಾವಿರಾರು ಜನ ಇದಾರೆ. ಕಾಲ ಬಂದ ಹಾಗೆ ಇನ್ನೂ ಜಾಸ್ತಿ ಆಗ್ತಾರೆ".

ಮಹೇಂದ್ರ ಹೇಳಿದ, ನೀವು ಹತ್ತರಿಂದ ಇಪ್ಪತ್ತು ಸಾವಿರ ಜನರಿದ್ದೀರಿ ಅಂತಾನೇ ಅಂದ್ಕೊಳ್ಳೋಣ. ಅಷ್ಟು ಜನರಿಂದ ಈ ಮುಸ್ಲಿಮರ ಆಳ್ವಿಕೆ ಕೊನೆಗೊಳಿಸಬಹುದಾ?"

ಭಾಬಾನಂದ ಮರು ಪ್ರಶ್ನೆ ಕೇಳಿದ, ಪ್ಲಾಸಿಯಲ್ಲಿ ಇಂಗ್ಲಿಷರ ಜೊತೆ ಎಷ್ಟು ಜನ ಇದ್ದರು?"

"ನೀನು ಬೆಂಗಾಲಿಗಳನ್ನು ಇಂಗ್ಲಿಷರ ಜೊತೆ ಹೋಲಿಸ್ತಿದೀಯ!"

"ಯಾಕೆ ಹೋಲಿಸಬಾರದು?" ಭಾಬಾನಂದ ಉತ್ತರಿಸಿದ," ಶರೀರದ ಬಲಕ್ಕೆ ಒಂದು ಮಿತಿ ಇದೆ. ಒಬ್ಬ ತುಂಬಾ ಶಕ್ತಿ ಇರೋನು ಹಾರಿಸೋ ಗುಂಡು ತುಂಬಾ ದೂರಕ್ಕೆ ಹಾರುತ್ತಾ?"

ಮಹೇಂದ್ರ ಕೇಳಿದ, ಹಾಗಿದ್ದರೆ ಇಂಗ್ಲಿಷರಿಗೂ ಮುಸ್ಲಿಮರಿಗೂ ಯಾಕೆ ಅಷ್ಟೊಂದು ವ್ಯತ್ಯಾಸ ಇದೆ?"

"ಹೇಳ್ತೀನಿ ಕೇಳು", ಎಂದ ಭಾಬಾನಂದ. ಒಬ್ಬ ಇಂಗ್ಲಿಷರವ ಬೆವರಿದ ತಕ್ಷಣ ಓಡುವ ಮುಸ್ಲಿಮನಂತೆ ಜೀವ ಕಾಪಾಡಿಕೊಳ್ಳಕ್ಕೆ ಅಂತ ಓಡುವುದಿಲ್ಲ. ಅವನು ಒಂದು ತಂಪಾದ ಪೇಯ ಹುಡುಕ್ತಾ ಶಾಂತನಾಗ್ತಾನೆ! ಇಂಗ್ಲಿಷರು ಅವರು ಶುರು ಮಾಡಿದ್ದನ್ನು ಮುಗಿಸಿಯೇ ತೀರುತ್ತಾರೆ. ಆದರೆ ಮುಸ್ಲಿಮ್ ಬೇಗ ಕ್ರಿಯಾಶೀಲನಾಗಿ ಸೋಲ್ತಾನೆ. ಸಿಪಾಯಿಗಳು ಹಣಕ್ಕಾಗಿ ಜೀವ ಪಣಕ್ಕಿಟ್ಟು ಹೋರಾಡ್ತಾರೆ; ಆದರೂ ಅವರಿಗೆ ಸಂಬಳ ಕೊಡುವುದಿಲ್ಲ. ಎಲ್ಲವುದಕ್ಕಿಂತ ನಮಗೆ ಮುಖ್ಯ ಅಂದ್ರೆ ಧೈರ್ಯ. ಒಂದು

[3] ಸುರುಳಿಯಾಕಾರದ ಕಪ್ಪುಕಲ್ಲಿನ ರೂಪದಲ್ಲಿರುವ, ಶೀರ್ಷಪಾದಿಯ ಚಿಪ್ಪಿನ ಪಳಿಯುಳಿಕೆಯನ್ನೊಳಗೊಂಡ ಅಂಡಾಕಾರದ ಕಲ್ಲು. ವಿಷ್ಣು ದೇವರ ಸಾನ್ನಿಧ್ಯಕ್ಕೆ ನೆಲೆಯನ್ನು ಒದಗಿಸಿದೆಯೆಂಬ ಭಾವನೆಯಿಂದ ಇದನ್ನು ಪೂಜಿಸಲಾಗುತ್ತದೆ.

ಫಿರಂಗಿ ಗುಂಡು ಒಂದು ಜಾಗದಲ್ಲಿ ಮಾತ್ರ ಬೀಳುತ್ತದೆಯೇ ಹೊರತು, ಹತ್ತು ಜಾಗದಲ್ಲಲ್ಲ. ಆದ್ದರಿಂದ ಒಂದು ಫಿರಂಗಿ ನೋಡಿ ಇನ್ನೂರು ಜನ ಓಡಬೇಕಿಲ್ಲ. ಆದರೂ ಒಂದು ಫಿರಂಗಿ ಗುಂಡು ನೋಡಿದರೆ ಮುಸ್ಲಿಮರ ಒಂದು ಸೈನ್ಯಾನೇ ಓಡಿ ಹೋಗುತ್ತೆ. ಆದರೆ ಒಂದು ರಾಶಿ ಫಿರಂಗಿ ಗುಂಡು ನೋಡಿದರೂ ಒಬ್ಬನೇ ಒಬ್ಬ ಇಂಗ್ಲಿಷರವ ಓಡಿಹೋಗುವುದಿಲ್ಲ".

"ನಿಮ್ಮ ಜನಕ್ಕೆ ನೀನು ಹೇಳೋ ಈ ಎಲ್ಲಾ ಉತ್ತಮ ಗುಣಗಳು ಇವೆಯಾ?", ಕೇಳಿದ ಮಹೇಂದ್ರ.

ಭಾಬಾನಂದ ಹೇಳಿದ, "ಇಲ್ಲ. ಯಾವ ಗುಣಗಳೂ ಮರದಿಂದ ಉದುರಿ ಬೀಳಲ್ಲ. ಅವುಗಳನ್ನು ರೂಢಿಸಿಕೊಳ್ಳಬೇಕು".

"ನೀವು ಆ ಕೆಲಸ ಮಾಡ್ತಾ ಇದೀರಾ?"

"ನಾವು ತ್ಯಾಗಿಗಳು ಅನ್ನೋದನ್ನು ನೀನು ನೋಡಿಲ್ವ?", ಭಾಬಾನಂದ ಉತ್ತರಿಸಿದ. ಈ ಗುಣಗಳನ್ನು ರೂಢಿಸಿಕೊಳ್ಳುವುದಕ್ಕೋಂತಲೇ ನಾವು ತ್ಯಾಗ ಮಾಡಿರೋದು. ನಮ್ಮ ಅಭ್ಯಾಸ ಪೂರ್ಣಗೊಂಡು, ಕೆಲಸ ಮುಗಿದ ಮೇಲೆ ನಾವು ನಮ್ಮ ಗೃಹಕೃತ್ಯಗಳಲ್ಲಿ ತೊಡಗಲು ವಾಪಸ್ ಹೋಗ್ತೀವಿ. ನಮಗೂ ಹೆಂಡರು, ಮಕ್ಕಳು ಇದಾರೆ".

ಮಹೇಂದ್ರ ಕೇಳಿದ, ಹಾಗಾದ್ರೆ ನಿಮಗೆ ಎಲ್ಲಾವುದನ್ನೂ ಪರಿತ್ಯಜಿಸಲು ಸಾಧ್ಯವಾಗಿದೆಯಾ? ಪ್ರಪಂಚದ ಎಲ್ಲಾ ಕಾಳಜೀನೂ?"

ಭಾಬಾನಂದ ಹೇಳಿದ, ಯಾವ *ಸನಾತನಿ*ಯೂ ಸುಳ್ಳು ಹೇಳಬಾರದು. ಅದಕ್ಕೇ ನಾನು ಒಣ ಜಂಭ ಕೊಚ್ಚುವುದಿಲ್ಲ. ಯಾರಿಗೆ ತಾನೇ ಪ್ರಾಪಂಚಿಕ ಕಾಳಜಿಗಳನ್ನು ತೊರೆಯಲು ಸಾಧ್ಯ? ಹಾಗೆ ಹೇಳೋರಿಗೆ ಪ್ರಪಂಚದ ಯಾವ ಜವಾಬ್ದಾರಿಯೂ ಇರುವುದಿಲ್ಲ ಅಥವಾ ಅವರು ಒಣ ಜಂಭ ಕೊಚ್ಚುತ್ತಾ ಇರ್ತಾರೆ. ನಾವು ಪ್ರಪಂಚದ ಸಂಬಂಧ ಕಡಿದುಕೊಂಡಿಲ್ಲ. ಆದರೆ ಒಂದು ಪ್ರತಿಜ್ಞೆ ಮಾಡಿದೀವಿ. ನೀನು *ಸನಾತನಿ* ಆಗ್ತೀಯಾ?"

"ನನಗೆ ನನ್ನ ಹೆಂಡತಿ ಮತ್ತು ಮಗಳ ಬಗೆಗೆ ಕೇಳುವವರೆಗೆ ನಿನ್ನ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಆಗುವುದಿಲ್ಲ".

"ಒಳ್ಳೆಯದು. ಹಾಗಿದ್ರೆ ಬಾ, ಅವರನ್ನು ಭೇಟಿಮಾಡು".

ಅವರು ಮತ್ತೆ ತಮ್ಮ ದಾರಿಯನ್ನು ಹಿಡಿದು ನಡೆದರು. ಭಾಬಾನಂದ ಪುನಃ ವಂದೇ ಮಾತರಂ ಹಾಡಲು ಶುರುಮಾಡಿದ. ಒಳ್ಳೆಯ ಧ್ವನಿ ಮತ್ತು ಸಂಗೀತದ ಜ್ಞಾನ ಮತ್ತು ಪ್ರೀತಿಯಿದ್ದ ಮಹೇಂದ್ರ ಅವನೊಡನೆ ಹಾಡಿದ. ಹಾಡುತ್ತಾ ಹಾಡುತ್ತಾ ಅವನ ಕಣ್ಣಲ್ಲೂ ನೀರು ಬಂದಿತು.

ಅವನು ಭಾಬಾನಂದನಿಗೆ ಹೇಳಿದ, ನಾನು ನನ್ನ ಹೆಂಡತಿ ಮತ್ತು ಮಗುವನ್ನು ಬಿಡಬೇಕಿಲ್ಲ ಅಂದರೆ ನೀನು ನನ್ನನ್ನು ಪ್ರತಿಜ್ಞೆಯಲ್ಲಿ ತೊಡಗಿಸಬಹದು".

ಭಾಬಾನಂದ ಹೇಳಿದ, "ಯಾರೇ ಈ ಪ್ರತಿಜ್ಞೆ ಮಾಡುವುದಾದರೂ ಅವರು ಹೆಂಡತಿ ಮಕ್ಕಳನ್ನು ಬಿಡಬೇಕು. ನೀನು ಪ್ರತಿಜ್ಞೆ ಮಾಡಿದರೆ ನೀನೂ ಸಹ ಹೆಂಡತಿ ಮತ್ತು ಮಗಳನ್ನು ನೋಡುವ ಹಾಗಿಲ್ಲ. ಅವರನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತದೆ, ಆದರೆ ನಿನ್ನ ಶಪಥ ಈಡೇರುವವರೆಗೆ ನೀನು ಅವರನ್ನು ನೋಡುವುದು ನಿಷಿದ್ಧ".

"ಹಾಗಿದ್ದರೆ ನಾನು ಪ್ರತಿಜ್ಞೆ ಮಾಡಲಾರೆ", ಉತ್ತರಿಸಿದ ಮಹೇಂದ್ರ.